# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2264
2. ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ
3. ಉತ್ತರಿಸಬೇಕಾದ ದಿನಾಂಕ : 26.03.2026
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸಣ್ಣ ನೀರಾವರಿ ಇಲಾಖೆ, ಪಂಚಾಯತ್ ರಾಜ್ & ಗ್ರಾಮೀಣಾಭಿವೃದ್ಧಿ ಇಲಾಖೆ, ಅರಣ್ಯ ಇಲಾಖೆ/ಇತರೆ ಇಲಾಖೆ ಅಡಿಯಲ್ಲಿ ಇರುವ ಕೆರೆಗಳ ಪೈಕಿ ಒತ್ತುವರಿ ಮಾಡಿರುವ ಎಷ್ಟು ಅನಧಿಕೃತವಾಗಿ ಕೆರೆಗಳನ್ನು ತೆರವುಗೊಳಿಸಲಾಗಿದೆ; | ಕೊಪ್ಪಳ ಜಿಲ್ಲೆಯಲ್ಲಿ ಒತ್ತುವರಿಯಾದ ಕೆರೆಗಳ ಪೈಕಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 4 ಕೆರೆಗಳಲ್ಲಿ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಉಳಿದ ಇಲಾಖೆಯ ಕೆರೆಗಳಲ್ಲಿ ಒತ್ತುವರಿ ಒತ್ತುವರಿ ಕಂಡು ಬಂದಿರುವುದಿಲ್ಲ . |
| ಆ | ಕಳೆದ 3 ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕೆರೆಗಳ ಬಫರ್ ವಲಯದಲ್ಲಿ ಎಷ್ಟು ಕಟ್ಟಡಗಳಿಗೆ ಅನುಮತಿ ನೀಡಲಾಗಿದೆ; (ಇಲಾಖೆವಾರು ವಿವರ ಒದಗಿಸುವುದು) | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2014 ಹಾಗೂ ತದನಂತರದ ತಿದ್ದುಪಡಿಗಳನ್ವಯ ಕಟ್ಟಡಗಳಿಗೆ ಅನುಮತಿ ನೀಡಲು ಅವಕಾಶ ಇರುವುದಿಲ್ಲ. |
| ಇ | ಇದೇ ಅವಧಿಯಲ್ಲಿ ಎಷ್ಟು ಅಕ್ರಮ ಕಟ್ಟಡಗಳನ್ನು ಗುರುತಿಸಲಾಗಿದೆ ಮತ್ತು ಎಷ್ಟು ತೆರವುಗೊಳಿಸಲಾಗಿದೆ; ಪ್ರಸ್ತುತ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; | ಉದ್ಭವಿಸುವುದಿಲ್ಲ. |
| ಈ | ಹೊಸ ಬಫರ್ ವಲಯ ನಿಯಮ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಪರಿಸರ, ನೆರೆ ಅಪಾಯ ಹಾಗೂ ಭೂಗರ್ಭ ಜಲಮಟ್ಟದ ಮೇಲೆ ಆಗುವ ಪರಿಣಾಮ ಕುರಿತು ಸರ್ಕಾರ ಯಾವುದೇ ವೈಜ್ಞಾನಿಕ ಅಧ್ಯಯನ ನಡೆಸಿದೆಯೇ; ಇದ್ದರೆ, ಅದರ ಪ್ರತಿಯನ್ನು ಒದಗಿಸುವುದು; | ಹೊಸ ಬಫರ್ ವಲಯ ನಿಯಮ ಜಾರಿಗೆ ಬಂದ ನಂತರ ಜಲ ಸಂಗ್ರಹ ಸಾಮರ್ಥ್ಯ, ನೆರೆ ಪರಿಸ್ಥಿತಿ ಹಾಗೂ ಭೂಗರ್ಭ ಜಲ ಮಟ್ಟದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂಬ ಬಗ್ಗೆ ಸದರಿ ಇಲಾಖೆಗಳ ಅಧಿಕಾರಿಗಳೊಂದಿಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ತಾಂತ್ರಿಕ ಸಮಿತಿಯ ಸಭೆಯಲ್ಲಿ ಚರ್ಚಿಸಿ ಈ ರೀತಿಯ ಯಾವುದೇ ಪರಿಣಾಮಗಳು ಸಂಭವಿಸುವ ಸಾಧ್ಯತೆ ಇರುವುದಿಲ್ಲ ಎಂದು ಅಭಿಪ್ರಾಯಿಸಲಾಗಿರುತ್ತದೆ. |
| ಉ | ಭವಿಷ್ಯದಲ್ಲಿ ಕೆರೆ ನಾಶ/ನೆರೆ ಹಾನಿ ಸಂಭವಿಸಿದಲ್ಲಿ ಹೊಣೆಗಾರಿಕೆ ನಿಗದಿ ಮಾಡುವ ಹಾಗೂ ಸಾರ್ವಜನಿಕರಿಗೆ ಪರಿಹಾರ ನೀಡುವ ಯಾವುದೇ ಜಿಲ್ಲಾ ಮಟ್ಟದ ಕಾರ್ಯಯೋಜನೆ ಸರ್ಕಾರ ರೂಪಿಸಿದೆಯೇ? | ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: MID/33/LCQ/2026

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.